30TH JUNE 2005

ಕರ್ನಾಟಕ ವಿಧಾನ ಸಭೆ

ಗುರುವಾರ ದಿನಾಂಕ 30ನೇ ಜೂನ್ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.07 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆ

ಅಧ್ಯಕ್ಷರು :– ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಕೆ. ಪ್ರಭಾಕರ್ ಹಾಗೂ ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ತುಳಸಿದಾಸ್ ದಾಸಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ್

ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಕೆ. ಪ್ರಭಾಕರ್ ಅವರು 1916ನೇ ಆಗಸ್ಟ್ 1 ರಂದು ನೆಲಮಂಗಲ ತಾಲ್ಲೂಕಿನ ಹೊನ್ನಸಂದ್ರ ಗ್ರಾಮದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಗಾಂಧಿವಾದಿಗಳಾಗಿದ್ದರು. ಗ್ರಾಮೀಣ, ಸಾಮಾಜಿಕ ಶಿಕ್ಷಣ, ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀಯುತರು ಒಂದು, ಮೂರು, ನಾಲ್ಕು, ಐದು ಹಾಗೂ ಆರನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು, ಶ್ರೀ ನಿಜಲಿಂಗಪ್ಪನವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ, ಶ್ರೀ ದೇವರಾಜ ಅರಸ್ ಅವರ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಹಾಗೂ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ : 14–05–2005ರಂದು ನಿಧನ ಹೊಂದಿದರು.

ಶ್ರೀ ತುಳಸಿದಾಸ್ ದಾಸಪ್ಪ

ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ತುಳಸಿದಾಸ್ ದಾಸಪ್ಪ ಅವರು 1929ನೇ ಜುಲೈ, 16ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರಾಗಿದ್ದರು. 1938ರಲ್ಲಿ

ಮೈಸೂರು ರಾಜ್ಯದ ಶಿವಪುರದಲ್ಲಿ ಕಾಂಗ್ರೆಸ್‌ನ "ವಾನರಸೇನೆಯ ಕೆಡೆಟ್‌ನ" ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1942ರಲ್ಲಿ "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಭಾಗವಹಿಸಿದ್ದರು. 1962ರ ತನಕ ಮೈಸೂರಿನಲ್ಲಿ ತಿಲಕ ಸಂಘದ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ "ಸೋಷಿಯಲ್ ಸೈನ್ಸ್ ಸೆಮಿನಾರ್"ನ ಅಧ್ಯಕ್ಷರಾಗಿ, ಮೈಸೂರು ಹಾಗೂ ಹಾಸನದ ಯುವ ಕೃಷಿಕ ಸಂಘದ ಸದಸ್ಯರಾಗಿ, ಮೈಸೂರು ಹಾಗೂ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಅಧ್ಯಕ್ಷರಾಗಿ, ಮೈಸೂರಿನ ಯುವ ಕಾಂಗ್ರೆಸ್ ಸಮಿತಿಯ ಆಮಂತ್ರಿತರಾಗಿ, ಯುವ ಕಾಂಗ್ರೆಸ್‌ನ ವಿಶ್ವಸಂಸ್ಥೆಯ ಪ್ರತಿನಿಧಿಯಾಗಿ, ರಾಷ್ಟ್ರ ಮಟ್ಟದ ಕಾಂಗ್ರೆಸ್ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1962, 1967 ಮತ್ತು 1972ರಲ್ಲಿ ಮೈಸೂರು ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ : 19-04-2005ರಂದು ನಿಧನ ಹೊಂದಿದರು.

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಈ ದಿನ ನಮ್ಮ ರಾಜ್ಯದ ಹಿರಿಯರಾದ ಶ್ರೀ ಕೆ. ಪ್ರಭಾಕರ್‌ರವರು ಮಾಜಿ ಮಂತ್ರಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಒಟ್ಟು ಐದು ಭಾರಿ ಅವರು ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ದಿವಂಗತ ಕೆ. ಪ್ರಭಾಕರ್‌ರವರು ಅಪ್ಪಟ ಗಾಂಧಿವಾದಿ. ನಾವು ಪ್ರಪ್ರಥಮವಾಗಿ ವಿಧಾನಸಭೆಗೆ ಬಂದಾಗ ಅವರೂ ಕೂಡ ನೆಲಮಂಗಲ ಕ್ಷೇತ್ರದಿಂದ ಆರಿಸಿ ಬಂದಿದ್ದರು. ದಿವಂಗತ ದೇವರಾಜ ಅರಸುರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೂಡ ಕೆಲಸ ಮಾಡಿದ್ದರು. ಅವರು ಪ್ರಾಮಾಣಿಕರು ಕೇವಲ ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿವಾಗಿ ಎಂದು ಅಲ್ಲ, ಅದರಲ್ಲೂ ಬಹಳ ನಿಷ್ಠೆಯಿಂದ ಭಕ್ತಿಯಿಂದ ಮತ್ತು ಗ್ರಾಮೀಣ ಪ್ರದೇಶದ ಸಮಸ್ಯೆಗಳ ಬಗ್ಗೆ ಪ್ರತಿಪಾದನೆ ಮಾಡತಕ್ಕಂತಹ ಅವರು ಯಾವಾಗಲೂ ರಾಜ್ಯದ ಪ್ರವಾಸದಲ್ಲಿ ಇದ್ದಾಗ ತಮ್ಮ ಇಲಾಖೆಯ ಬಗ್ಗೆ ಹೇಳತಕ್ಕಂತಹ ಕಾಲದಲ್ಲಿ ಬಹಳ ಒಳ್ಳೆಯ ಭಾಷಣಕಾರರೂ ಆಗಿದ್ದರು. ಸಾಕಷ್ಟು ಉದಾಹರಣೆಗಳನ್ನು ಕೊಟ್ಟು ವಿಶೇಷವಾಗಿ ಸಾಮಾನ್ಯ ಜನರಿಗೆ ಹಿಡಿಸತಕ್ಕಂತಹ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು. ರಾಜ್ಯ ಮದ್ಯಪಾನ ನಿಗಮದ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದರು. ನಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾಗಿದ್ದರು. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಮಂತ್ರಿಗಳಾಗಿದ್ದರು. ಅವರ ನಿಕಟವರ್ತಿಗಳು ಮತ್ತು ವಿಶೇಷವಾಗಿ ದೇವರಾಜ ಅರಸುರವರ ಕಾಲದಲ್ಲಿ ಕೂಡ ಅವರು ಮಂತ್ರಿಗಳಾಗಿದ್ದರು. 12 ವರ್ಷಗಳ ಕಾಲ ಸತತವಾಗಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರ ಅಗಲಿಕೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತು ವಿಶೇಷವಾಗಿ ಈ ನಮ್ಮ ಕರ್ನಾಟಕ ರಾಜ್ಯದ ಜನತೆಗೆ ಹಾನಿಯಾಗಿದೆ.

ನಾನು ಈ ದಿನ ದಿವಂಗತ ಪ್ರಭಾಕರ್‌ರವರ ಆತ್ಮಕ್ಕೆ ಶಾಂತಿ ಸಿಗಲಿ, ಮತ್ತು ಅವರ ಪರಿವಾರದವರಿಗೆ ಮತ್ತು ಅವರ ಮಕ್ಕಳಿಗೆ ಭಗವಂತ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಸಹಿಸ ತಕ್ಕಂತಹ ಶಕ್ತಿಯನ್ನು ದೇವರು ದಯಪಾಲಿಸಲಿ, ಮತ್ತು ನಿಮ್ಮ ಮುಖಾಂತರ ನನ್ನ ಸಂತಾಪ ವ್ಯಕ್ತ ಮಾಡುತ್ತಿದ್ದೇನೆ.

ಎರಡನೇಯದಾಗಿ, ಶ್ರೀ ತುಳಸಿದಾಸ್ ದಾಸಪ್ಪನವರು ತಮಗೆ ಗೊತ್ತಿದ್ದ ಹಾಗೆ ಶ್ರೀಮಾನ್ ಪಂಡಿತ್ ಜವಾಹರಲಾಲ್ ನೆಹರುರವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ ಅವರ ಸಂಪುಟದಲ್ಲಿ ದಾಸಪ್ಪನವರು ರೈಲ್ವೆ ಸಚಿವರಾಗಿ ಕೆಲಸ ಮಾಡಿದ್ದರು. ಶ್ರೀಮಾನ್ ದಾಸಪ್ಪನವರ ಪರಿವಾರ ಸ್ವಾತಂತ್ರ್ಯಕ್ಕೆ ಮುಡುಪಾಗಿಟ್ಟಂತಹವರ ಪರಿವಾರ ಗಾಂಧೀಜಿಯವರ ಜೊತೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆಲಸ ಮಾಡಿದ್ದರು. ಅವರ ತಾಯಿಯವರಾದ ಶ್ರೀಮತಿ ಯಶೋಧರ ದಾಸಪ್ಪನವರೂ ಕೂಡ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮ ಮಹಿಳಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷಿಣಿಯಾಗಿದ್ದರು ಮತ್ತು ಅವರೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಈ ಒಂದು ಮದ್ಯಪಾನ ನಿಷೇಧದಲ್ಲಿ ಕೂಡ ಪ್ರತಿಭಟನೆ ಮಾಡಿ ರಾಜೀನಾಮೆ ಕೊಟ್ಟ ತಾಯಿ ಮತ್ತು ತಂದೆಗಳ ಸಂಸ್ಕಾರ ಅವರಲ್ಲಿತ್ತು. ಅಂಥ ಕುಟುಂಬದಲ್ಲಿ ಬೆಳೆದು ಬಂದು ತುಳಸಿದಾಸ್‌ರವರೂ ಕೂಡ ಮೂರು ಸಾರಿ ಲೋಕಸಭೆಗೆ ಆರಿಸಿ ಹೋಗಿದ್ದರು. ಅವರು ಯುವ ಕಾಂಗ್ರೆಸ್ ಅಧ್ಯಕ್ಷರೂ ಕೂಡ ಆಗಿದ್ದರು. ನಾವು ಮತ್ತು ಖರ್ಗೆಯವರು ಬಹಳಷ್ಟು ಸಲ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ಬಹಳ ಸರಳ ಸ್ವಭಾವದವರು ಮತ್ತು ಬಹಳಷ್ಟು ಸಂಘ ಸಂಸ್ಥೆಗಳ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡು ವಿಶೇಷವಾಗಿ ವಿಧವೆಯರ ಮಹಿಳೆಯರ ಮತ್ತು ಅನಾಥರ ಆಶ್ರಮದಲ್ಲಿ ಕೂಡ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡತಕ್ಕಂತಹ ಒಂದು ಪ್ರವೃತ್ತಿ ಬೆಳೆಸಿಕೊಂಡು ಬಂದಿದ್ದರು. ಇವತ್ತು ಪಿ.ಎಂ.ಸಯೀದ್‌ರವರು ಕೇಂದ್ರದ ಸಚಿವರಾಗಿದ್ದಾರೆ. ಪಿ.ಎಮ್. ಸಯೀದ್‌ರವರು ಮತ್ತು ತುಳಸಿದಾಸ್ ದಾಸಪ್ಪನವರು ಜೊತೆಯಲ್ಲಿ ಮೈಸೂರಿನಲ್ಲಿ ಓದಿದವರು. ಅದೇರೀತಿಯಲ್ಲಿ ಲೋಕಸಭೆ ಸದಸ್ಯರಾಗಿದ್ದಾಗ ಬಹಳ ಘನತೆಯಿಂದ ಇದ್ದವರು. ಅವರೂ ಕೂಡ ತುಳಸಿದಾಸ್ ದಾಸಪ್ಪನವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ನಾನು ಮತ್ತು ಮಾನ್ಯ ಸಯೀದ್‌ರವರು ಅವರು ಆಸ್ಪತ್ರೆಯಲ್ಲಿ ಇದ್ದಾಗ ಹೋಗಿ ನೋಡಿಕೊಂಡು ಬಂದಿದ್ದೇವೆ. ಅವರ ಮತ್ತು ನನ್ನ ವೈಯುಕ್ತಿಕ ಸಂಬಂಧ ಚೆನ್ನಾಗಿ ಇತ್ತು. ಅಂತಹವರು ಲೋಕಸಭಾ ಸದಸ್ಯರಾಗಿ. ಇವತ್ತಿನ ಕಾಲದಲ್ಲಿ ಸರಳ ಜೀವಿಯಾಗಿ ಮತ್ತು ವಿಶೇಷವಾಗಿ ಮೈಸೂರು ಭಾಗದಿಂದ ಬಂದಂತಹವರು ಕರ್ನಾಟಕದಲ್ಲಿ ಕೂಡ ಬಹಳಷ್ಟು ಕೆಲಸಕಾರ್ಯಗಳು ಮಾಡಿದ್ದಾರೆ. ಅವರು ಗಾಂಧಿವಾದಿಗಳಾಗಿದ್ದರು. ಇಂತಹ ಒಬ್ಬ ನಾಯಕರನ್ನು ಕಳೆದುಕೊಂಡಿದ್ದಕ್ಕೆ ನಾನು

ಸಂತಾಪಸೂಚನೆಯನ್ನು ಅವರ ಮನೆಯವರಿಗೆ ಮತ್ತು ಮಕ್ಕಳಿಗೆ ತಮ್ಮ ಮುಖಾಂತರ ಕೊಡುತ್ತಿದ್ದೇನೆ. ಮತ್ತು ಈ ಒಂದು ಸದನಲ್ಲಿ ತಾವು ಏನು ಸಂತಾಪ ಸೂಚನೆ ಮಂಡಿಸಿದ್ದೀರಿ, ಅದಕ್ಕೆ ನಾನು ಅನುಮೋದನೆ ಕೊಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :– ಸನ್ಮಾನ್ಯ ಅಧ್ಯಕ್ಷರೆ, ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ಧ್ವನಿಗೂಡಿಸುತ್ತಾ, ಸನ್ಮಾನ್ಯ ಕೆ. ಪ್ರಭಾಕರ್‌ರವರು ಹಾಗೂ ಶ್ರೀ ತುಳಸಿದಾಸ್ ದಾಸಪ್ಪನವರು ಒಂದು ತತ್ವ ನೀತಿ ಸಿದ್ಧಾಂತಕ್ಕೆ ಬದ್ಧರಾಗಿ ಗಾಂಧಿವಾದಿಗಳಾಗಿ ಈ ನಾಡಿಗೆ ಸೇವೆ ಸಲ್ಲಿಸಿದಂತಹ ಇಬ್ಬರು ಮಹನೀಯರನ್ನು ನಾವು ಕಳೆದುಕೊಂಡಿದ್ದೇವೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಅವತ್ತಿನ ಕಾಲದಲ್ಲಿ ಪ್ರಭಾಕರ್‌ರವರು ಐದು ಭಾರಿ ವಿಧಾನ ಸಭೆಗೆ ಸತತವಾಗಿ ಆಯ್ಕೆಯಾಗಿ ಬಂದಿದ್ದರು ಮತ್ತು ಶ್ರೀ ತುಳಸಿದಾಸ್ ದಾಸಪ್ಪನವರು ಮೂರು ಭಾರಿ ಮೈಸೂರಿನಿಂದೆ ಲೋಕಸಭೆಗೆ ಆಯ್ಕೆಯಾಗಿ ಹೋದರು ಎಂದರೆ ಅವರು ಯಾವ ರೀತಿ ಜನಪ್ರಿಯತೆ ಇಟ್ಟುಕೊಂಡಿದ್ದರು, ಜನರ ಜೊತೆ ಸಂಬಂಧ ಇಟ್ಟುಕೊಂಡಿದ್ದರು, ತತ್ವ ನೀತಿ ಮತ್ತು ಸಿದ್ಧಾಂತಕ್ಕೆ ಬದ್ಧರಾಗಿದ್ದರು ಎಂದು ಇಲ್ಲಿ ತಿಳಿದುಕೊಳ್ಳಬೇಕಾದ ವಿಷಯ. ಇವತ್ತು ಆಯಾರಾಂ ಗಯಾರಾಂ ಎಂಬ ಸಂಸ್ಕೃತಿ ಇದೆ. ಪಕ್ಷಾಂತರ ಪಿಡುಗು ಇದೆ. ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾದ ರೀತಿಯಲ್ಲಿ ನಡವಳಿಕೆಗಳನ್ನು ಮಾಡುತ್ತಿರುವಂತಹ ಈ ಕಾಲದಲ್ಲಿ ಒಂದು ವಿಚಾರಕ್ಕೆ ಬದ್ಧರಾದ ಇಂತಹ ವ್ಯಕ್ತಿಗಳನ್ನು ಸ್ಮರಣೆ ಮಾಡಬೇಕು. ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರು ರಾಜ್ಯಕ್ಕಾಗಿ ದೇಶಕ್ಕಾಗಿ ಮಾಡಿದಂತಹ ಸೇವೆಯನ್ನು ಸ್ಮರಣೆ ಮಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಬಹುಶಃ ಇದೇ ಸಂದರ್ಭದಲ್ಲಿ ಇಬ್ಬರು ದೈವಾಧೀನರಾಗಿದ್ದಾರೆ ಅದನ್ನು ತಾವು ಸೇರಿಸಬೇಕೆಂದು ವಿನಂತಿ ಮಾಡುತ್ತೇನೆ. ಮಾಜಿ ಸಚಿವರಾದ ಡಾ॥ ದಾಮೋದರ ಮುಲ್ಕಿ ಇವರು ತಮ್ಮ 76ನೇ ವಯಸ್ಸಿನಲ್ಲಿ ದೈವಾಧೀನರಾಗಿದ್ದಾರೆ. ಮಾಜಿ ಸಚಿವರಾಗಿದ್ದರು ಮಾನ್ಯ ದೇವರಾಜು ಅರಸ್‌ರವರ ಕಾಲದಲ್ಲಿ 1979 ರಲ್ಲಿ ರಾಜ್ಯ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದರು. ಈ ಹೆಸರುಗಳನ್ನೂ ಕೂಡ ತಾವು ಸಂತಾಪ ಸೂಚನೆಯಲ್ಲಿ ಸೇರಿಸಬೇಕೆಂದು ವಿನಂತಿ ಮಾಡುತ್ತೇನೆ. ಶ್ರೀಮಾನ್ ಎಸ್.ಟಿ. ಶೌರಿಯವರು ಗ್ರಾಹಕ ಜಾಗೃತಿಯ ಪಿತಾಮಹ ಇವರು ಅವರ 98ನೇ ವರ್ಷದಲ್ಲಿ ನಿಧನರಾದರು. ಶ್ರೀ ಅರುಣ್‌ಶೌರಿಯವರು ಶ್ರೀ ಎಸ್.ಟಿ. ಶೌರಿಯವರ ಮಕ್ಕಳು ಎಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿಯ ಒಬ್ಬ ಗ್ರಾಹಕ ಜಾಗೃತಿಯ ಪಿತಾಮಹ ತೀರಿಕೊಂಡರು. ಇವರ ಹೆಸರನ್ನೂ ಸಂತಾಪ ಸೂಚಕ ನಿರ್ಣಯದಲ್ಲಿ ಸೇರಿಸಬೇಕೆಂದು ಸಭಾಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಅವರ ಮನೆಗಳಿಗೂ ಕೂಡ ಸಂತಾಪ ಸೂಚನೆಯನ್ನು ಕಳುಹಿಸಿಕೊಡಬೇಕೆಂದು ಕೇಳುತ್ತಾ, ಇವರ ಆತ್ಮಕ್ಕೆ

ಶಾಂತಿ ಕೋರುತ್ತಾ ನೀವು ತಂದಿರತಕ್ಕಂತಹ ಸಂತಾಪ ಸೂಚನೆಗೆ ನನ್ನ ಧ್ವನಿಗೂಡಿಸುತ್ತಾ, ನನ್ನ ಪಕ್ಷದ ಪರವಾಗಿ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ಸನ್ಮಾನ್ಯ ಅಧ್ಯಕ್ಷರೆ, ದಿವಂಗತ ಇಬ್ಬರು ಹಿರಿಯರಿಗೆ ನಾನು ನನ್ನ ಪಕ್ಷದ ಪರವಾಗಿ ಹಾಗೂ ನನ್ನ ವೈಯುಕ್ತಿಕವಾದ ಸಂತಾಪವನ್ನು ಸೂಚಿಸುತ್ತಾ, ಮಾನ್ಯ ಪ್ರಭಾಕರ್‌ರವರ ಒಡನಾಟ ನಮಗೆ ಅಷ್ಟಾಗಿ ಇಲ್ಲ. ಆದರೂ ಅತ್ಯಂತ ಹಿರಿಯರು, ಸತತವಾಗಿ ಐದು ಬಾರಿ ಶಾಸನ ಸಭಾ ಸದಸ್ಯರಾಗಿದ್ದವರು ಏನು ಮೃತರಾಗಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಮನೆಯವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸಿ ಮಾನ್ಯ ತುಳಸಿದಾಸ್ ದಾಸಪ್ಪನವರೊಂದಿಗೆ ನಾವು ವಿದ್ಯಾರ್ಥಿಗಳಾಗಿದ್ದಾಗ ಆ ಕಾಲದಲ್ಲಿ ಸ್ವಲ್ಪ ಒಡನಾಟ ಇಟ್ಟು ಕೊಂಡಿದ್ದೇವು. ಅವರನ್ನು ಬೇರೆ ರಾಜಕಾರಣಿಗಳಿಗೆ ಹೋಲಿಸಿದರೆ ಒಂದು ಅಪ್ಪಟ ಮಗು ಇದ್ದ ಹಾಗೆ ಇದ್ದು ರಾಜಕಾರಣ ಮಾಡುತ್ತಿದ್ದರು. ತಂದೆ ತಾಯಿ ಇಬ್ಬರು ಮಂತ್ರಿಗಳಾಗಿ ಈ ನಾಡಿನ ಸೇವೆ ಮಾಡಿದ್ದರೂ ಕೂಡ ಮಾನ್ಯ ತುಳಸಿದಾಸ್ ದಾಸಪ್ಪನವರು ಎಂದರೆ ನಾವು ಒಂದು ಮಗುವಿನ ಹತ್ತಿರ ಮಾತನಾಡುತ್ತಿದ್ದೇವೆ ಎನ್ನುವ ಹಾಗೆ ಇತ್ತು. ಅಷ್ಟು ಮುಗ್ಧರಾಗಿದ್ದರು ಅವರು ಅವರಿಗೆ ಒಳ್ಳೆಯದು, ಕೆಟ್ಟದ್ದು, ವ್ಯಂಗ್ಯ ಅಷ್ಟಾಗಿ ಅರ್ಥವಾಗದೆ ಇದ್ದ ಮನುಷ್ಯ ಎಂಬುದು ನನ್ನ ಭಾವನೆ. ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ ಅವರ ಜೊತೆ ಒಟನಾಟ ಇಟ್ಟುಕೊಂಡಿದ್ದೆವು. ಅವರ ದುರಾದೃಷ್ಟ ಅವರು ಮಂತ್ರಿಗಳಾಗಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಕುಟುಂಬದಿಂದ ಬಂದರೂ ಕೂಡ ಶ್ರೀಮತಿ ಯಶೋಧರಮ್ಮನವರು ಮತ್ತು ದಾಸಪ್ಪನವರು ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರೂ, ಅದೇ ಕುಟುಂಬದಿಂದ ಬಂದ ಮನುಷ್ಯನಾಗಿ, ಅವರ ಮಗನಾಗಿ ಬಂದು ಈ ನಾಡಿಗೆ ಅವರು ಮಾಡಿರುವ ಸೇವೆಯನ್ನು ನಾನು ಸ್ಮರಿಸಿ, ಶ್ಲಾಘಿಸಿ ಅವರ ಆತ್ಮಕ್ಕೆ ಕೂಡ ಶಾಂತಿ ಸಿಗಲಿ ಎಂದೂ, ಅವರ ಕುಟುಂಬದವರು ಆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ. ಇವರ ಜೀವನ ನಮಗೆಲ್ಲಾ ಮಾರ್ಗದರ್ಶನ ಆಗಲಿ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) :– ಮಾನ್ಯ ಅಧ್ಯಕ್ಷರೇ, ದಿವಂಗತ ಕೆ. ಪ್ರಭಾಕರ್‌ರವರು ಹಾಗೂ ತುಳಸಿದಾಸ್ ದಾಸಪ್ಪನವರು, ಇವರಿಬ್ಬರೂ ಮಹಾ ವ್ಯಕ್ತಿಗಳು, ಕೆ. ಪ್ರಭಾಕರ್‌ರವರು ಮಂತ್ರಿಗಳಾಗಿದ್ದಾಗ ಆಗಲೂ ನಾನು ಶಾಸಕನಾಗಿದ್ದೆ. ಅವರು ಬಹಳ ಒಳ್ಳೆಯ ಆದರ್ಶವಾದ ವ್ಯಕ್ತಿಯಾಗಿದ್ದರು. ಈ ಸದನಲ್ಲಿ ಅವರು ಉತ್ತರ ಕೊಡಬೇಕಾದರೆ ಬಹಳ ಪ್ರಾಮಾಣಿಕವಾಗಿ, ಯಾವುದೇ ಸದಸ್ಯರು ಪ್ರಶ್ನೆಗಳನ್ನು ಕಳುಹಿಸಿದಾಗ ಉತ್ತರ ಕೊಡಬೇಕಾದರೆ ಆ ಕಡೆಯಲ್ಲಿ ಕುಳಿತು ಮಂತ್ರಿಯಾಗಿ ಆದರ್ಶವಾದ, ನಿಜವಾದ ಮತ್ತು

ಸತ್ಯವಾದ ಮತ್ತು ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟು ಒಳ್ಳೆಯ ಒಬ್ಬ ಆದರ್ಶವಾದ ವ್ಯಕ್ತಿಯಾಗಿ ಈ ಸದನದಲ್ಲಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇದರ ಜೊತೆಗೆ ಈ ರಾಜ್ಯದ ಹಿಂದುಳಿದ ವರ್ಗದವರಿಗಾಗಿ, ದೀನದಲಿತ ವರ್ಗದವರಿಗಾಗಿ ಮತ್ತು ಎಲ್ಲಾ ವರ್ಗದವರಿಗಾಗಿ ಅಪಾರವಾದ ಕೆಲಸವನ್ನು ಇವರು ಮಾಡಿರತಕ್ಕಂತವರಾಗಿದ್ದಾರೆ. ಅವರೊಬ್ಬ ಶಿಸ್ತಿನ ಸಿಪಾಯಿ. ಮಾನ್ಯ ನಿಜಲಿಂಗಪ್ಪನವರಿಗೆ ಅವಿಚ್ಛಿನ್ನ, ಅತ್ಯಂತ ಅಭಿಮಾನಿ ಮತ್ತು ಸಹಪಾಠಿ ಹಾಗೂ ಅವರ ಜೊತೆ ಕೆಲಸ ಮಾಡಿರತಕ್ಕಂಥವರು. ಕರ್ನಾಟಕ ಏಕೀಕರಣಕ್ಕಾಗಿ ಕರ್ನಾಟಕ ನಾಮಕರಣಕ್ಕಾಗಿ, ಇದೆಲ್ಲಕ್ಕೂ ದ್ವನಿಗೂಡಿಸಿ ನಿಂತಂಥ ಒಬ್ಬ ವ್ಯಕ್ತಿ, ಇದರ ಜೊತೆಯಲ್ಲಿ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿಯೂ ಕೂಡ ಅವರು ಕೆಲಸ ಮಾಡಿ ರಾಜ್ಯದಲ್ಲಿ ಒಳ್ಳೆಯ ಹೆಸರುವಾಸಿ ಮಾಡಿರತಕ್ಕಂಥವರು. ಇನ್ನು ತುಳಸಿದಾಸ್ ದಾಸಪ್ಪನವರು ಆದರ್ಶಕ್ಕೆ ಹೆಸರುವಾಸಿ, ಇವ್ರೊತ್ತು ಇವರಿಬ್ಬರೂ ಆದರ್ಶ ಎನ್ನುವ ಪದಕ್ಕೆ ಸರಿಸಮಾನರು. ಆದರ್ಶ ಪದಕ್ಕೆ ಅರ್ಥ ಹೇಳುವುದಾದರೆ ಪ್ರಭಾಕರ್ ಮತ್ತು ತುಳಸಿದಾಸ್ ದಾಸಪ್ಪನವರು ಆದರ್ಶ ರಾಜಕಾರಣ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಇವರುಗಳದ್ದು ನಿಜಕ್ಕೂ ಆದರ್ಶವಾದ ರಾಜಕಾರಣವಾಗಿದೆ ಏಕೆಂದರೆ ಇವರು ನಿಜಕ್ಕೂ ಪ್ರಾಮಾಣಿಕವಾಗಿ ಆದರ್ಶವಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಲಸವನ್ನು ಮಾಡಿದ್ದಾರೆ. ತುಳಸಿದಾಸ್ ದಾಸಪ್ಪ ಮತ್ತು ಅವರ ಮನೆತನದವರು ಇಡೀ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅಪಾರವಾದ ಸೇವೆಯನ್ನು ಮಾಡಿದ್ದಾರೆ. ದಾಸಪ್ಪನವರು ರೈಲ್ವೆ ಸಚಿವರಾಗಿದ್ದಾಗ ಅವರ ಕಾಲದಲ್ಲಿ ಕರ್ನಾಟಕ ರಾಜ್ಯಕ್ಕೆ ಅಪಾರವಾದ ಸೇವೆಯಾಗಿದೆ. ಯಶೋಧರಮ್ಮ ದಾಸಪ್ಪನವರು ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಬೇಕಾದರೆ ಒಂದು ಷರತ್ತನ್ನು ಹಾಕಿದರು. ಅದೇನು ಷರತ್ತು ಎಂದರೆ ಪಾನ ನಿರೋಧವನ್ನು ಸಮಗ್ರವಾಗಿ ಜಾರಿಗೆ ತರುವುದಾದರೆ ತಮ್ಮ ಸಂಪುಟದಲ್ಲಿ ಮಂತ್ರಿಯಾಗಿ ಇರುತ್ತೇನೆ ಎಂದು ನಿಜಲಿಂಗಪ್ಪನವರಿಗೆ ಹೇಳಿದರು. ನಿಜಲಿಂಗಪ್ಪನವರು ಇದಕ್ಕೆ ಒಪ್ಪಿಕೊಂಡು ಅವರನ್ನು ಸಂಪುಟಕ್ಕೆ ತೆಗೆದುಕೊಂಡರು. ಈ ಸದನದಲ್ಲಿ ಪಾನ ನಿರೋಧದ ಚರ್ಚೆ ಬಂದಾಗ ಸರ್ಕಾರ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಹಿಂದೇಟು ಹಾಕಿತು. ತಕ್ಷಣವೇ ಅವರು ಈ ಸದನದಲ್ಲಿ ನಿಜಲಿಂಗಪ್ಪನವರಿಗೆ ಹೇಳಿದರು, ನಿಮ್ಮ ಬಗ್ಗೆ ಗೌರವವಿದೆ. ಆದರೆ ನಾನು ಮಂತ್ರಿಯಾಗಿ ಉಳಿಯುವುದಿಲ್ಲ, ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ಅವರನ್ನು ಸಚಿವರಾಗಿ ಉಳಿಸಿಕೊಳ್ಳುವುದಕ್ಕೆ ಏನೆಲ್ಲಾ ಸಾಹಸ ಮಾಡಿದರೂ ಕೂಡ ಅದಕ್ಕೆ ಒಪ್ಪದೇ ಅವರು ಆ ಕ್ಷಣದಲ್ಲಿಯೇ ಪ್ರಾಮಾಣಿಕವಾಗಿ ರಾಜೀನಾಮೆಯನ್ನು ಕೊಟ್ಟು ಹೊರಗೆ ಹೋದರು. ಈ ರೀತಿ ಆದರ್ಶ ಇವ್ರೊತ್ತು ನಮಗ್ಯಾರಿಗೂ ಇಲ್ಲ. ಆದರೆ ಇವ್ರೊತ್ತು ಪಾನ ನಿರೋಧ ತರುತ್ತೀರಾ ಎಂದರೆ ಎಲ್ಲಿ ತರುವುದಕ್ಕೆ ಸಾಧ್ಯ? ಸಾಧ್ಯವೇ ಇಲ್ಲ. ಏಕೆಂದರೆ ಈ ಪ್ರಪಂಚದಲ್ಲಿ ಎಲ್ಲಾ ದೇಶಗಳಲ್ಲಿಯೂ

ಕುಡಿಯುತ್ತಿರುವಾಗ ಪಾನ ನಿರೋಧವನ್ನು ಎಲ್ಲಿ ತರುತ್ತೀರಿ ಹೇಳಿ. ಪಾನ ನಿರೋಧ ಜಾರಿ ಎಲ್ಲಾದರೂ ತರುವುದಕ್ಕೆ ಸಾಧ್ಯವಾಗುತ್ತದೆಯೇ? ಆದರೆ ಇದೇ ಸದನಲ್ಲಿ ಯಶೋಧರಮ್ಮ ದಾಸಪ್ಪನವರನ್ನು ನಾವು ನೋಡಿದ್ದೇವೆ. ಯಶೋಧರಮ್ಮ ದಾಸಪ್ಪನವರು ಮದ್ಯಪಾನ ಬೇಡವೆಂದು ಹೇಳಿದಾಗ ಪಾನ ನಿರೋಧವನ್ನು ಜಾರಿಗೆ ತರಲಿಲ್ಲವೆಂದು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಅದೇ ರೀತಿ ರಾಜೀನಾಮೆ ಕೊಡುವ ಪ್ರಶ್ನೆಯೇ ಬರುವುದಿಲ್ಲ, ಇಡೀ ರಾಷ್ಟ್ರದಲ್ಲಿ, ಪ್ರಪಂಚದಲ್ಲಿ ಜನರು ಕುಡಿಯುತ್ತಾರೆ. ಆದಕಾರಣ ರಾಜೀನಾಮೆ ಕೊಡಬೇಕಾದ ಪ್ರಮೆಯವೇ ಬರುವುದಿಲ್ಲವೆಂದು ಕೆಲವರು ಹೇಳಿದ್ದನ್ನೂ ಕೂಡ ನಾನು ಈ ಸದನದಲ್ಲಿ ನೋಡಿದ್ದೇನೆ. ಆದ್ದರಿಂದ ಈ ಎರಡೂ ಕಣ್ಣುಗಳಿಂದ ನಾನು ಅದನ್ನೂ ನೋಡಿದೆ, ಮತ್ತು ಇದನ್ನೂ ನೋಡಿದೆ. ಇಂತಹ ಆದರ್ಶ ವ್ಯಕ್ತಿಗಳಾಗಿದ್ದ ಇಬ್ಬರೂ ಕೂಡ ಈ ಸದನದಲ್ಲಿ ಇದ್ದು ಹೋಗಿದ್ದಾರೆ. ದಾಸಪ್ಪನವರು, ಯಶೋಧರಮ್ಮ ದಾಸಪ್ಪನವರು, ತುಳಸಿದಾಸ್ ದಾಸಪ್ಪ ಹೀಗೆ ಇಡೀ ಮನೆತನದವರೆ ಜಾತಿ, ಭೇದಭಾವವಿಲ್ಲದೆ, ಈ ರಾಷ್ಟ್ರದ ಬಗ್ಗೆ, ರಾಜ್ಯದ ಬಗ್ಗೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದರು. ನಾನು ತಮಗೆ ಏನು ಹೇಳುತ್ತೇನೆಂದರೆ, ದಾಸಪ್ಪನವರ ಬಗ್ಗೆ, ಯಶೋಧರಮ್ಮ ದಾಸಪ್ಪನವರ ಬಗ್ಗೆ ನಮ್ಮಲ್ಲಿ ಸ್ಮಾರಕಗಳು ಇಲ್ಲ. ನಾನು ಅನೇಕ ಸಾರಿ ಹೇಳಿದ್ದೇನೆ. ಸುಮ್ಮನೆ ಈ ಸದನದಲ್ಲಿ ಸಂತಾಪ ಸೂಚಕ ಸಭೆ ಮಾಡಿ, ವರ್ಷಕ್ಕೆ ಮೂರ್ನಾಲ್ಕು ಬಾರಿ ಸದನ ನಡೆದಾಗ ಅಜೆಂಡಾದಲ್ಲಿ ಸಂತಾಪ ಸೂಚನೆ ಎಂದು ಹಾಕುತ್ತಿರುತ್ತಾರೆ. ನಾನು ಹೇಳುವುದೇನೆಂದರೆ ಈ ರೀತಿಯಲ್ಲಿ ಸಂತಾಪ ಸೂಚನೆ ಮಾಡುವುದಕ್ಕಿಂತ ಇಂಥ ಆದರ್ಶ ವ್ಯಕ್ತಿಗಳಿಗೆ, ಅಂದರೆ ಪ್ರಭಾಕರ್ ಅಂಥವರಿಗೆ, ದಾಸಪ್ಪನವರಂಥವರಿಗೆ, ತುಳಸಿದಾಸ್ ದಾಸಪ್ಪನವರಂಥವರಿಗೆ ಯಶೋಧರಮ್ಮ ದಾಸಪ್ಪನವರಿಗೆ ರಾಜ್ಯದಲ್ಲಿ ಒಂದು ರೀತಿಯಲ್ಲಿ ವಿನೂತನವಾದಂಥ, ವಿಶಿಷ್ಟವಾದಂಥ ರೀತಿಯಲ್ಲಿ ಗೌರವ ತೋರಿಸುವುದಕ್ಕೆ ಸ್ಮಾರಕ ಮಾಡುವುದರ ಬಗ್ಗೆ ಮಾನ್ಯ ಅಧ್ಯಕ್ಷರಾದ ತಾವು ಚಿಂತನೆಯನ್ನು ಮಾಡಬೇಕು. ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಕೊನೆಯ ದಿನಗಳಲ್ಲಿ ಒಂದು ಸಭೆಯನ್ನು ಕರೆದು ನಾವು ಯಾವ ರೀತಿಯಲ್ಲಿ ಸ್ಮಾರಕ ಮಾಡಬೇಕು ಎನ್ನುವುದರ ಬಗ್ಗೆ ಒಂದು ಚಿಂತನೆಯನ್ನು ಮಾಡೋಣವೆಂದು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿ ದಿವಂಗತರುಗಳ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಅಧ್ಯಕ್ಷರೇ, ತಾವು ಇಂದು ಇಬ್ಬರು ಗಣ್ಯ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚನೆಯನ್ನು ತಾವೇನು ಮಂಡಿಸಿದ್ದೀರಿ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ನಾನು ಕೊಡುತ್ತೇನೆ. ಬಹಳ ಮುಖ್ಯವಾಗಿ ಕೆ. ಪ್ರಭಾಕರ್‌ರವರ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲ. ಏಕೆಂದರೆ ಅವರ ಜೊತೆ ಅಷ್ಟು ಒಡನಾಟ

ಇರಲಿಲ್ಲ. ತುಳಸಿದಾಸ್ ದಾಸಪ್ಪನವರ ಜೊತೆ ಹೇಗೆ ನಮ್ಮ ಸಂಬಂಧ ಇತ್ತೆಂದರೆ, ಮೈಸೂರಿನಲ್ಲಿ ತುಳಸಿದಾಸ್ ದಾಸಪ್ಪನವರು ಸಮಾಜ ವಿಜ್ಞಾನ ಕೇಂದ್ರದ ಅಧ್ಯಕ್ಷರಾಗಿದ್ದರು; ಇಡೀ ದೇಶದಲ್ಲಿ ಮತ್ತು ಜಗತ್ತಿನಲ್ಲಿ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಮಾಡುವುದಕ್ಕೆ ವೇದಿಕೆಯನ್ನು ಮೈಸೂರಿನಲ್ಲಿ ಅವರು ಹುಟ್ಟುಹಾಕಿದರು. ಅದರಲ್ಲಿ ಜಗತ್ತಿನ ಬೇರೆ ಬೇರೆ ಕಡೆಗಳಿಂದ ವಿದ್ವಾಂಸರುಗಳನ್ನು ಬುದ್ದಿಜೀವಿಗಳನ್ನು ಕರೆದು ಆ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕಾಗಿಯೇ ಅವರು ಪ್ರತ್ಯೇಕವಾದ ವೇದಿಕೆಯನ್ನು ಮೈಸೂರಿನಲ್ಲಿ ರಚನೆ ಮಾಡಿದ್ದರು. ಸೆಮಿನಾರ್ ಎಂದಲ್ಲ, ಅಲ್ಲಿ ಸೋಶಿಯಲ್ ಸೈನ್ಸ್ ಫೋರಂ ಎಂದು ಇತ್ತು, ಬೆಂಗಳೂರಿನಲ್ಲಿಯೂ ಕೂಡ ಮಾನ್ಯ ಕೆ. ಹೆಚ್. ರಂಗನಾಥ್‌ರವರು ಅದರ ಶಾಖೆಯನ್ನು ತೆರೆದಿದ್ದರು. ಆ ಸಂದರ್ಭದಲ್ಲಿ ತುಳಸಿದಾಸ್ ದಾಸಪ್ಪನವರ ಜೊತೆ ನಮ್ಮ ಸಂಪರ್ಕ ಪ್ರಾರಂಭವಾಯಿತು. ಅವರ ಕುಟುಂಬ ಕಾಂಗ್ರೆಸ್‌ನವರಾಗಿದ್ದರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ನಡೆಸಿದ್ದರೂ ಕೂಡ ಅವರಿಗೆ ವೈಜ್ಞಾನಿಕ ಸಮಾಜವಾದದಲ್ಲಿ ಸಂಪೂರ್ಣವಾದ ನಂಬಿಕೆ ಇತ್ತು. ಆ ತತ್ವಕ್ಕೋಸ್ಕರ ವೈಜ್ಞಾನಿಕ ಸಮಾಜವಾದವನ್ನು ಭಾರತ ದೇಶದಲ್ಲಿ ಹೇಗೆ ತರಬೇಕೆನ್ನುವ ಬಗ್ಗೆ ಬಹಳ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡುತ್ತಿದ್ದಂಥ ವ್ಯಕ್ತಿಗಳಲ್ಲಿ ತುಳಸಿದಾಸ್ ದಾಸಪ್ಪನವರೂ ಒಬ್ಬರಾಗಿದ್ದರು. ಅದರ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ಅವರು ಮಾಡುತ್ತಿದ್ದರು. ಇದರ ಜೊತೆಗೆ ಅವರ ಆದರ್ಶ ಮತ್ತು ಸರಳತೆ ಏನಿತ್ತೋ ಅದು ಇವೊತ್ತು ಬಹುಶಃ ಯಾರಲ್ಲೂ ಇರಲು ಸಾಧ್ಯವಿಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ಯಾರು ಎಷ್ಟೇ ಹೇಳಿದರೂ ಕೂಡ ಇದು ಅವರಂಥ ಆದರ್ಶ ಹಾಗೂ ಸರಳತೆಯನ್ನು ಮತ್ತು ಪ್ರಮಾಣಿಕತೆಯನ್ನು ಸಾರ್ವಜನಿಕ ಜೀವನದಲ್ಲಿ ಅಳವಡಿಸಿಕೊಂಡಿರುವವರ ಸಂಖ್ಯೆ ಬಹಳ ಕಡಿಮೆಯಾಗುತ್ತಿದೆ ಮತ್ತು ಮೌಲ್ಯಗಳೂ ಕೂಡ ಕುಸಿಯುತ್ತಿವೆ. ಹೀಗಿರುವಾಗ ಇಂಥ ಒಂದು ಸಂದರ್ಭದಲ್ಲಿ ಇಂಥ ಪರಂಪರೆಯನ್ನು ಹೊಂದಿರತಕ್ಕಂಥವರನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಇವರೊಬ್ಬರನ್ನೇ ಅಲ್ಲ, ಇಂಥ ಒಂದು ಪರಂಪರೆಯನ್ನು ಹೊಂದಿರತಕ್ಕಂಥ ಹಲವಾರು ಜನರನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಆ ಕಳಕಳಿಯನ್ನು ಇಟ್ಟುಕೊಂಡಂಥವರಿಗೆ, ಅವರ ಭಾವನೆಗಳನ್ನು ಮತ್ತು ಅವರ ಆದರ್ಶಗಳನ್ನು ಮತ್ತು ತತ್ವಗಳನ್ನು ಪ್ರಚಾರ ಮಾಡುವುದಕ್ಕೆ ಸರ್ಕಾರ ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸಿದರೆ ನಿಜವಾದಂಥ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ, ಎನ್ನತಕ್ಕಂಥದ್ದು ನನ್ನ ಅಭಿಪ್ರಾಯವಾಗಿದೆ. ಆ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಹಲವಾರು ಜನ ಇಂಥವರು ಇರಬಹುದು, ಅವರ ತತ್ವಗಳು, ಆದರ್ಶಗಳು ಸಿದ್ಧಾಂತಗಳನ್ನು ಪ್ರಚಾರ ಮಾಡುವುದಕ್ಕೆ ಮತ್ತು ಸಾಹಿತ್ಯದ ಮುಖಾಂತರ ಪ್ರಚಾರ ಮಾಡುವುದಕ್ಕೆ ಒಂದು ನಿರ್ದಿಷ್ಟವಾದಂಥ ಕಾರ್ಯಕ್ರಮವನ್ನು ಸರ್ಕಾರವೇ ರೂಪಿಸಿ ಆ ಬಗ್ಗೆ ವ್ಯವಸ್ಥೆಯನ್ನು

ಮಾಡಿದರೆ ಬಹುಶಃ ಹಿಂದಿನ ಪೀಳಿಗೆಯವರಲ್ಲಿ ಇಂಥ ಆದರ್ಶಗಳು ಇತ್ತು ಎಂಬುದು ಇಂದಿನವರಿಗೆ ಮತ್ತು ಮುಂದಿನವರಿಗೆ ಗೊತ್ತಾಗುತ್ತದೆ. ಆದುದರಿಂದ ಅಂಥ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿಸಿ ದಿವಂಗತರುಗಳ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :– ಮಾನ್ಯ ಅಧ್ಯಕ್ಷರೆ, ದಿವಂಗತರಾದ ಕೆ.ಪ್ರಭಾಕರ್‌ರವರು ಹಾಗೂ ತುಳಸಿದಾಸ್‌ದಾಸಪ್ಪನವರು, ಇಬ್ಬರೂ ಕೂಡ ಈ ಸದನದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅವರು ಇಲ್ಲಿರುವ ಕಾಲದಲ್ಲಿ ನಾನು ಅವರನ್ನು ನೋಡಿಯೇ ಇಲ್ಲ. ಆದರೆ ಅವರುಗಳು ಈ ಸದನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದು ಹಲವಾರು ಸದಸ್ಯರುಗಳು ಈಗ ಇಲ್ಲಿ ಮಾತನಾಡಿದ್ದಾರೆ. ಯಾರೊಬ್ಬರು ತೀರಿಹೋಗುತ್ತಾರೋ ಆ ಸಂದರ್ಭದಲ್ಲಿ ಅವರು ತುಂಬಾ ಒಳ್ಳೆಯವರು, ಅವರು ಈ ರೀತಿ ಇದ್ದರು ಎಂದೆಲ್ಲಾ ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುತ್ತೇವೆ. ಯಾರು ನಿಜವಾಗಿ ತಮ್ಮ ಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೋ ಅಂಥವರು ಇರುವಂಥ ಸಂದರ್ಭಗಳಲ್ಲಿ ನಾವು ಆ ರೀತಿ ಹೇಳುವುದೇ ಇಲ್ಲ. ಆದುದರಿಂದ ಕಡೇ ಪಕ್ಷ ಅವರು ತೀರಿಹೋದ ಮೇಲಾದರೂ ಅವರು ಮಾಡಿರತಕ್ಕಂಥ ಸೇವೆಗಳನ್ನು ಗಂಭೀರವಾಗಿ ಸ್ಮರಿಸಿ ಹೇಳಬೇಕಾಗುತ್ತದೆ. ಮಾನ್ಯ ಪ್ರಭಾಕರ್‌ರವರು ರೈತ ಕುಟುಂಬದಲ್ಲಿ ಬಂದಿರುವಂಥವರು. ಇಬ್ಬರು ಮುಖ್ಯಮಂತ್ರಿಗಳ ಸಂಪುಟದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ತುಳಸೀದಾಸಪ್ಪನವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೆಲಸ ಮಾಡಿದ್ದಾರೆ. ಅವರು ನಮಗೋಸ್ಕರ ಬಹಳ ಹೋರಾಟವನ್ನು ಮಾಡಿ ಈ ಸದನದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದಕಾರಣ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲೆಂದು ಹಾಗೂ ದಿವಂಗತರ ಆತ್ಮಕ್ಕೆ ಶಾಂತಿ ದೊರಕಲೆಂದು ನಾನು ನನ್ನ ಪಕ್ಷದ ಪರವಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಜಲಸಂಪನ್ಮೂಲ ಸಚಿವರು) :– ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೆ. ಪ್ರಭಾಕರ್‌ರವರು ಮತ್ತು ತುಳಸಿದಾಸ್ ದಾಸಪ್ಪನವರ ನಿಧನದಿಂದ ನಿಜವಾಗಿ ಗಾಂಧಿವಾದದ ತತ್ವಕ್ಕೆ ಒಂದು ದೊಡ್ಡ ಕೊಡಲಿ ಪೆಟ್ಟು ಬಿದ್ದಂತಾಗಿದೆ.

ವಿಶೇಷವಾಗಿ, ಶ್ರೀ ಕೆ. ಪ್ರಭಾಕರ್ ಅವರು ದಲಿತ ವರ್ಗದಲ್ಲಿ ಹುಟ್ಟಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಗಾಂಧೀಜಿ ಅವರ ತತ್ವ ಮತ್ತು ನೀತಿಯನ್ನು ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತಂದಂತಹ ವ್ಯಕ್ತಿ. ಅವರು ಏನು ಹೇಳುತ್ತಿದ್ದರು, ಅದೇ ರೀತಿಯಾಗಿ

ನಡೆದುಕೊಂಡು ಹೋಗತಕ್ಕಂಥ ಸ್ವಭಾವ ಅವರದು ಇತ್ತು. ಅವರ ಜೊತೆಯಲ್ಲಿ ನನಗೆ ಸಾಕಷ್ಟು ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ಅದು 1972ರಲ್ಲಿ, 1978ರಲ್ಲಿ ಹಾಗೂ 1983ರಲ್ಲಿ ಅವರು ಸದಸ್ಯರಾಗಿದ್ದಾಗ ಕೂಡ ಅವರ ಜೊತೆಯಲ್ಲಿ ನಾನು ಮಂತ್ರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ಅಂತಹ ಒಬ್ಬ ಧೀಮಂತ ನಾಯಕ, ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿ, ಅದರಲ್ಲೂ ಬಡವರ ಮೇಲೆ ಪ್ರೀತಿಯನ್ನು ಇಟ್ಟುಕೊಂಡು ಹೆಚ್ಚಿನ ಕೆಲಸ ಮಾಡತಕ್ಕಂಥ ಸ್ವಭಾವ ಅವರಲ್ಲಿ ಇತ್ತು. ಅವರು ಮಾನ್ಯ ನಿಜಲಿಂಗಪ್ಪನವರ ಕ್ಯಾಬಿನೇಟ್‌ನಲ್ಲಿ ಕೂಡ ಕೆಲಸ ಮಾಡಿದ್ದರು. ಅಲ್ಲದೆ ಮಾನ್ಯ ದೇವರಾಜ್ ಅರಸು ಅವರ ಕ್ಯಾಬಿನೇಟ್‌ನಲ್ಲಿ ಕೂಡ ಕೆಲಸ ಮಾಡಿ, ತಮಗೆ ಏನು ಅನಿಸುತ್ತಿತ್ತೋ ಅದನ್ನು ಬಹಳ ಫ್ರಾಂಕ್ ಆಗಿ ಹೇಳುವಂತಹ ವ್ಯಕ್ತಿಯಾಗಿದ್ದರು. ನನಗೆ ಒಂದು ಸಂಗತಿ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿದೆ. 1978ರಲ್ಲಿ ಮಾನ್ಯ ದೇವರಾಜು ಅರಸು ಅವರು ಮತ್ತು ನಾವೆಲ್ಲರೂ ಕೂಡ ಪುನರಾಯ್ಕೆಯಾಗಿ ಬಂದೆವು. ಆಗ ಒಂದು ಹೊಸ ಮಂತ್ರಿಮಂಡಲವನ್ನು ರಚನೆ ಮಾಡತಕ್ಕಂಥ ಸಂದರ್ಭ ಬಂದಾಗ ಯಾವುದೋ ಒಂದು ಕಾರಣದಿಂದ ಕೇವಲ 20 ಸಚಿವರನ್ನು ಮಾತ್ರ ತೆಗೆದುಕೊಳ್ಳಬೇಕು ಎನ್ನುವಂತಹ ನಿರ್ಣಯವನ್ನು ದೇವರಾಜ ಅರಸು ಅವರು ತೆಗೆದುಕೊಂಡಿದ್ದರು. ಆ ಕಾಲದಲ್ಲಿ ನಮ್ಮಂತಹ ಕೆಲವು ಯುವಕರನ್ನು ಬಿಟ್ಟರು. ನಂತರ ಒಂದು ಬಾರಿ ನಾವು ನಾಲ್ಕು ಜನ ಒಂದು ಕಡೆ ಕುಳಿತ್ತಿದ್ದೆವು. ಯಾರ್ಯಾರು ಅಂದರೆ ಮಾನ್ಯ ಬಸವಲಿಂಗಪ್ಪನವರು, ನಾನು, ರಂಗನಾಥ್‌ರವರು, ದೇವರಾಜು ಅರಸು, ಕೆ. ಪ್ರಭಾಕರ್‌ರವರು ಹಾಗೂ ಶ್ರೀಮತಿ ಮನೋರಮ ಮಧ್ವರಾಜ್‌ರವರು ಕುಳಿತ್ತಿದ್ದಂತಹ ಸಂದರ್ಭದಲ್ಲಿ ಕೆ. ಪ್ರಭಾಕರ್‌ರವರು ಸ್ಪಷ್ಟವಾಗಿ ಯಾರಿಗೂ ಹೆದರದೆ ಮಾನ್ಯ ದೇವರಾಜ್ ಅರಸು ಅವರಿಗೆ ಒಂದು ಮಾತು ಹೇಳಿದರು. ನೀವು ಯಾವ ಕಾರಣಕ್ಕಾಗಿ ಮಲ್ಲಿಕಾರ್ಜುನ ಖರ್ಗೆಯವರನ್ನು ಕೈಬಿಟ್ಟಿದ್ದೀರಿ? ನಾಳೆ ಜನ ನಮ್ಮನ್ನು ಕೇಳುತ್ತಾರೆ. ಅವರು ಶಿಕ್ಷಣ ಸಚಿವರಾಗಿ ಒಳ್ಳೆಯ ಕೆಲಸ ಮಾಡಿ, ಸಾವಿರಾರು ಜನರನ್ನು ಬ್ಯಾಕ್‌ಲಾಗ್‌ನಲ್ಲಿ ತುಂಬಿ Since beginning grant ಕೊಡಿಸಿ ಹೊಸ ಸಂಸ್ಥೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟರು. ನಮ್ಮೆಲ್ಲರಿಗಿಂತ ಹೆಚ್ಚಿನ ಕೆಲಸ ಮಾಡಿದಂತಹ ವ್ಯಕ್ತಿಯನ್ನು ಬಿಟ್ಟು ನೀವು ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದರು. ತಕ್ಷಣ ಮಾನ್ಯ ದೇವರಾಜ್ ಅರಸು ಕೂಡ ಅದಕ್ಕೆ ರೆಸ್ಪಾಂಡ್ ಮಾಡಿದರು. ಏನು ಮಾಡುವುದು 20 ಜನರಲ್ಲಿ 16 ಜನರನ್ನು ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡಿದ್ದೇನೆ. ಆ 16 ಜನರಲ್ಲಿ ನೀವು 4 ಜನ ಇದ್ದೀರಿ, ಮೂವರು ಮಂತ್ರಿಗಳು, ಒಬ್ಬರು ಸ್ಪೀಕರ್ ಆಗಿದ್ದೀರಿ. ಅದಕ್ಕೆ 16ರಲ್ಲಿ 4 ಹೋದರೆ 1:4 ಆದ ಹಾಗೆ ಆಯಿತು. ಆದ್ದರಿಂದ ಇನ್ನು ಮುಂದೆ ಅವರಿಗೆ ಅವಕಾಶ ಮಾಡಿಕೊಡುತ್ತೇನೆ. ನಮಗೆ ಯಾರ ಶಿಫಾರಸ್ಸು ಕೂಡ ಬೇಕಾಗಿಲ್ಲವೆಂದು ಹೇಳಿದಾಗ, ಮಾನ್ಯ ಪ್ರಭಾಕರ್‌ರವರು, ಇಲ್ಲ ಸ್ವಾಮಿ ನೀವು ಈಗಲೇ ಮಾಡಬೇಕಾಗಿತ್ತು., ಮುಂದೆ

ಏನಾಗುತ್ತದೋ ಎಂದು ಹೇಳಿದರು. ಇದನ್ನು ನೋಡಿದರೆ ಅವರು ತನಗೆ ತಿಳಿದಂತಹ ಮಾತನ್ನು ನೇರವಾಗಿ ಹೇಳುವಂತಹ ವ್ಯಕ್ತಿ ಮತ್ತು ಯಾವುದೇ ವ್ಯಕ್ತಿ ಮೇಲೆ ಪ್ರೀತಿ ವಿಶ್ವಾಸ ಇದ್ದರೆ ಅವರ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಿ ಸಹಾಯ ಮಾಡತಕ್ಕಂತ ಒಂದು ಒಳ್ಳೆಯ ಗುಣ ಅವರಲ್ಲಿತ್ತು. ಅವರು ಸುಮಾರು 90 ವರ್ಷಗಳ ಕಾಲ ಜೀವಿಸಿ, ಗ್ರಾಮೀಣ ಭಾಗದ ಜನರಲ್ಲಿ ಬೆರೆತು, ಅವರ ಮನಸ್ಸಿನಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದಂತಹ ಒಬ್ಬ ವ್ಯಕ್ತಿ. ಅವರು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ಕುಟುಂಬಕ್ಕೆ ಸಹಿಸಲಾಗದಂತಹ ದುಃಖ ಹಾಗೂ ನಷ್ಟ ಏನು ಉಂಟಾಗಿದೆ ಆ ದುಃಖವನ್ನು ಸಹಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಶ್ರೀ ತುಳಸಿದಾಸ್ ದಾಸಪ್ಪ ಅವರೂ ಕೂಡ ಬಹಳ ಸರಳ ಜೀವಿಗಳು. ಅನೇಕ ಸಾರಿ ನಾವು ಅವರಿಗೆ ಪಾರ್ಲಿಮೆಂಟಿಗೆ ಪುನಃ ಆರಿಸಿ ತರಬೇಕೆಂದು ಕೇಳಿಕೊಂಡಾಗ ಕೆಲವು ಸಲ ಅವರಾಗಿಯೇ, ಇಲ್ಲ ನಾನು 62ರಲ್ಲಿ ಇದ್ದೆ, 67ರಲ್ಲಿ ಇದ್ದೆ, 77ರಲ್ಲಿ ಇದ್ದೆ, ಈಗ ನನಗೆ ಬೇಡ ವಯಸ್ಸಾಗಿದೆ, ಎಲ್ಲಾ ಯಂಗ್‌ಸ್ಟರ್ಸ್ ಬರಲಿ ಎಂದು ಹೇಳಿ ಒಂದೆರಡು ಸಲ ಸ್ವತಃ ಅವರೆ ರಿಜೆಕ್ಟ್ ಮಾಡಿದರು, ಮತ್ತು ಅವರು ಆಸಕ್ತಿ ವಹಿಸಿದ್ದೂ ಕೂಡ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಆಶ್ರಮ ಶಾಲೆಗಳು, ಶಾಲೆಗಳು ಹಾಗೂ ಸೋಷಿಯಲ್ ವೆಲ್‌ಫೇರ್ ಆಕ್ಟಿವಿಟೀಸ್ ಮತ್ತು ಹರಿಜನ ಸೇವಾ ಸಂಘದಲ್ಲಿ ಕೆಲಸ ಮಾಡತಕ್ಕಂಥಾದ್ದರಲ್ಲಿ ಇತ್ತು. ಏಕೆಂದರೆ ಅವರು ಒಂದು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಿರುವಂತಹ, ಅವರಿಗೆ ವಿಶೇಷವಾದಂತಹ ಬ್ಯಾಕ್‌ಗ್ರೌಂಡ್ ಎಂದರೆ ಗಾಂಧೀಜಿಯವರ ತತ್ವ ಮತ್ತು ನೀತಿಯಲ್ಲಿ ಹೆಚ್ಚಿನ ಆಸಕ್ತಿ ಇದ್ದ ಕಾರಣ ಬಹುಶಃ ಅವರು ಅಷ್ಟೊಂದು ತ್ಯಾಗಮಯ ಜೀವನ ನಡೆಸಿದಂತಹ ಕುಟುಂಬ ಕರ್ನಾಟಕ ರಾಜ್ಯದಲ್ಲಿ ಬಹಳ ಕಡಿಮೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಇವತ್ತು ನಾವು ಮಾತನಾಡಿದರೆ ಜಾತಿ ಬಗ್ಗೆ ಮಾತನಾಡುತ್ತೇವೆ. ಮತ್ತು ನಮ್ಮ ಜನರಿಗೆ ಸಹಾಯ ಮಾಡುವ ಬಗ್ಗೆ ಮಾತನಾಡುತ್ತೇನೆ. ಆದರೆ ಅವರು ಆ ಕಾಲದಲ್ಲಿ ಎಲ್ಲಾ ಅಧಿಕಾರ ಇದ್ದರೂ ಕೂಡ ಆ ಅಧಿಕಾರದ ದುರುಪಯೋಗ ಕೂಡ ಮಾಡಲಿಲ್ಲ ಹಾಗೂ ಅಧಿಕಾರದ ಲಾಭ ಕೂಡ ತೆಗೆದುಕೊಳ್ಳಲಿಲ್ಲ. ಅಧಿಕಾರಕ್ಕೋಸ್ಕರ ಎಂದೂ ಆಸೆ ಪಟ್ಟಂತಹ ವ್ಯಕ್ತಿ ಆಗಿರಲಿಲ್ಲ. ಅಂತಹ ವ್ಯಕ್ತಿ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಆದುದರಿಂದ ಸಮಾಜ ಸೇವೆಯ ಕೆಲಸ ಮಾಡತಕ್ಕಂತಹ ಜನರಲ್ಲಿ ಒಂದು ದೊಡ್ಡ ಕೊರತೆ ಉಂಟಾಗಿದೆ. ನಾವೆಲ್ಲರೂ ಆ ಕೊರತೆಯನ್ನೂ ತುಂಬುವಂತಹ ಕೆಲಸ ಮಾಡುವುದು ಕಷ್ಟವಿದೆ. ಅಂತಹ ವ್ಯಕ್ತಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಾಜ ಸೇವಕರಾಗಿ ಹುಟ್ಟಬೇಕು ಎಂಬುದು ನಮ್ಮೆಲ್ಲರ ಆಸೆ. ಅವರಿಗೂ ಕೂಡ ಶ್ರದ್ಧಾಂಜಲಿಯನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ನಮ್ಮ ರಾಜ್ಯದ ಇಬ್ಬರು ಗಣ್ಯ ವ್ಯಕ್ತಿಗಳು ನಿಧನರಾಗಿದ್ದಾರೆ. ಅದರ ಹಿನ್ನಲೆಯಲ್ಲಿ ತಾವೇನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದರ ಬಗ್ಗೆ ನಾನು ಒಂದೆರೆಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಕೆ. ಪ್ರಭಾಕರ್‌ರವರು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನವರು. ನಮಗೆ ತಿಳಿದಿರುವ ಹಾಗೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಗೊಂದು ನಾಯಕತ್ವ ಇತ್ತು. ನಮ್ಮ ಕನಕಪುರದ ಪೂಜ್ಯ ಸೋರೇಕಾಯಿದೊಡ್ಡಿ ಎಸ್. ಕರಿಯಪ್ಪನವರು, ಶ್ರೀ ಬಿ.ಜೆ. ಲಿಂಗೇಗೌಡರು, ಶ್ರೀ ವೆಂಕಟಪ್ಪನವರು, ಕೆಂಗಲ್ ಹನುಮಂತಯ್ಯನವರು, ಆದಾದನಂತರ ದೊಡ್ಡ ಬಳ್ಳಾಪುರದ ರಾಮೇಗೌಡರು ಹಾಗೂ ಮಾನ್ಯ ಚೆನ್ನಭೈರೇಗೌಡರು ಇದ್ದರು. ಇವರೆಲ್ಲರ ಸಾಲಿಗೆ ಮಾನ್ಯ ಪ್ರಭಾಕರ್‌ರವರು ಸೇರಿದವರಾಗಿದ್ದರು. ಅವರು ಸ್ವತಃ ಒಂದು ದುರ್ಬಲ ವರ್ಗದಿಂದ ಬಂದು ಆ ವರ್ಗದ ಸಮಸ್ಯೆಗಳನ್ನು ಅರಿತುಕೊಂಡು, ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಒಂದು ಪ್ರಾಮಾಣಿಕವಾದ ಹೋರಾಟವನ್ನು ತಮ್ಮ ಜೀವನದ ಕೊನೇ ಉಸಿರಿನವರೆಗೆ ಸಹ ಮಾಡಿದರು. ಮತ್ತು ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆಗೆ ಬಹಳ ಹೆಚ್ಚಿನ ಒತ್ತನ್ನು ಕೊಟ್ಟಂತಹ ಮುಖಂಡರು. ಅವರು ಪ್ರಾಮಾಣಿಕತೆ ಬಗ್ಗೆ ಮಾತನಾಡುವುದು ಅಷ್ಟೇ ಅಲ್ಲ, ಸ್ವತಃ ಅವರ ವೈಯುಕ್ತಿಕ ಜೀವನದಲ್ಲಿ ಅದನ್ನು ಅಳವಡಿಸಿಕೊಂಡವರು, ಅವರು ಹಿಂದೆ ಮದ್ಯಪಾನ ಸಂಯಮ ಮಂಡಲಿಯ ಅಧ್ಯಕ್ಷರು ಆಗಿದ್ದರು. ನಾವು ಮಾಡಿರುವಂತಹ ಈ ಮಂಡಲಿಯ ಅಧ್ಯಕ್ಷರುಗಳ ಪೈಕಿ ಇವರು ಮಾತ್ರ ಜನಗಳ ಬಹಳ ಹತ್ತಿರಕ್ಕೆ ಹೋಗಿ ಯಾರು ಹೆಚ್ಚು ಮದ್ಯಪಾನವನ್ನು ಮಾಡುತ್ತಾರೆ. ಯಾರು ಆ ಚಟಕ್ಕೆ ಒಳಗಾಗಿರುತ್ತಾರೆ. ಅದನ್ನು ಬಿಡಿಸುವ ದೃಷ್ಟಿಯಿಂದ, ಬಹಳ ಪ್ರಭಾವಿಗಳಾಗಿ ಕೆಲಸ ಮಾಡಿರುವವರು ಎಂದರೆ ಮಾನ್ಯ ಪ್ರಭಾಕರ್‌ರವರು, ಮತ್ತು ಅವರಿಗೆ ಸಂಘ ಸಂಸ್ಥೆಗಳನ್ನು ಬೆಳೆಸುವುದರಲ್ಲಿ ಬಹಳ ಆಸಕ್ತಿ ಇತ್ತು. ಇವತ್ತಿನ ಪೀಳಿಗೆಗೆ ಈ ಮೌಲ್ಯಗಳನ್ನು ಎತ್ತಿಕೊಂಡು ಹೋಗಬೇಕು ಎನ್ನುವ ಆಸೆ ಕೂಡ ಇತ್ತು. ಇಂತಹ ಒಬ್ಬ ವ್ಯಕ್ತಿಯನ್ನು ಕಳೆದು ಕೊಂಡಿರುವುದರಿಂದ ನಮ್ಮ ಜಿಲ್ಲೆಯ ಅಭಿವೃದ್ಧಿಗೆ ದುಡಿದಂತಹ ಮಹನೀಯರನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರುತ್ತೇನೆ.

ಇನ್ನು ಇದೇ ಸಂದರ್ಭದಲ್ಲಿ ಶ್ರೀ ತುಳಸಿದಾಸ್ ದಾಸಪ್ಪ ಅವರು ನಮ್ಮ ರಾಜ್ಯದ ಮತ್ತು ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂತಹ ಒಂದು ದೊಡ್ಡ ಕುಟುಂಬದಿಂದ ಬಂದಂತಹ ಮಹಾನ್ ವ್ಯಕ್ತಿಗಳಾಗಿದ್ದರು. ಮಾನ್ಯ ಹೆಚ್.ಸಿ. ದಾಸಪ್ಪನವರು ಲೋಕಸಭೆಗೆ ಕನಕಪುರ ಕ್ಷೇತ್ರದಿಂದ ಗೆದ್ದು ಹೋಗಿದ್ದರು. ಇವತ್ತು ಪ್ರಾಮಾಣಿಕತೆಗೆ ಮತ್ತೊಂದು ಹೆಸರಾಗಿರತಕ್ಕಂಥ ಕೇಂದ್ರ ಸಚಿವರಾಗಿರತಕ್ಕಂಥ ಶ್ರೀ ಎಂ. ವಿ. ರಾಜಶೇಖರನ್

ಹಾಗೂ ತುಳಸಿದಾಸ್ ದಾಸಪ್ಪ ಅವರು ದೆಹಲಿಯಲ್ಲಿ ಒಟ್ಟಿಗೆ ವ್ಯಾಸಂಗ ಮಾಡಿದ್ದರು. ಮಾನ್ಯ ರಾಜಶೇಖರನ್ ಅವರು ಯಾವತ್ತು ಸಹ ಮಾನ್ಯ ತುಳಸಿದಾಸ್ ದಾಸಪ್ಪನವರನ್ನು ಹಿರಿಯ ಅಣ್ಣನಾಗಿ ನೋಡಿದವರು. ಆ ಕಾಲದಲ್ಲಿ ತುಳಸಿದಾಸ್ ದಾಸಪ್ಪನವರು, ಮಾನ್ಯ ನಿಜಲಿಂಗಪ್ಪನವರು, ಇವರೆಲ್ಲರೂ ಸಹ ಸಾರ್ವಜನಿಕ ಜೀನವದಲ್ಲಿ ಕೆಲವು ಮೌಲ್ಯಗಳಿಗೋಸ್ಕರ ಹೋರಾಟವನ್ನು ಮಾಡಿದವರು ಅಷ್ಟೇ ಅಲ್ಲ ತಮ್ಮಲ್ಲಿ ಅದನ್ನು ಅಳವಡಿಸಿಕೊಂಡವರು. ಅವರ ಕುಟುಂಬದ ಹಿನ್ನೆಲೆಗೆ ತಕ್ಕಂತೆ ತಮ್ಮ ಜೀವನದುದ್ದಕ್ಕೂ ಸಹ ಯಾವತ್ತು ಅಧಿಕಾರಕ್ಕೆ ಆಸೆ ಪಡದೆ ಕೇವಲ ತತ್ವಕ್ಕೋಸ್ಕರ, ಸರಳತೆ, ಸಜ್ಜನಿಕೆ ಹಾಗೂ ಪ್ರಾಮಾಣಿಕತೆಯಿಂದ ನಡೆದುಕೊಂಡು ಬಂದಿರತಕ್ಕಂತಹ ನಾಯಕರುಗಳಲ್ಲಿ ಮಾನ್ಯ ತುಳಸಿದಾಸ್ ದಾಸಪ್ಪನವರಿಗೆ ಒಂದು ವಿಶಿಷ್ಟವಾದ ಸ್ಥಾನಮಾನ ಸಿಗುತ್ತದೆ ಎಂದು ನಾನು ತಿಳಿದುಕೊಂಡಿರತಕ್ಕಂಥವನು. ತುಳಸಿದಾಸ್ ದಾಸಪ್ಪನವರಿಗೆ ಕೊನೆಯ ದಿನಗಳಲ್ಲಿ ಸುಮಾರು 4–5 ತಿಂಗಳುಗಳ ಹಿಂದೆಯೇ ತನಗೆ ಅಂತಿಮ ಬಂದಿದೆಯೆಂದು ಗೊತ್ತಾಗಿದೆ. ಅವರು ಸಾಗರ್ ಅಪೊಲೋ ಆಸ್ಪತ್ರೆಯಲ್ಲಿ ಇದ್ದಾಗ ನಾನು ಮತ್ತು ಅನೇಕ ಮುಖಂಡರು ಅವರನ್ನು ನೋಡಲು ಹೋಗಿದ್ದೆವು. ಆ ಸಂದರ್ಭದಲ್ಲಿ ಅವರು ಹೇಳಿದಂತಹ ಮಾತುಗಳನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಯಸುತ್ತೇನೆ. ಅವರು ನನಗೆ ಸಿಂಧ್ಯಾರವರೆ, ನಮ್ಮದೆಲ್ಲಾ ಮುಗಿಯಿತು. ಇನ್ನು ನಿಮ್ಮಂಥವರು ಬೇಕಾಗಿದೆ, ನೀವು ಆದಷ್ಟು ಪ್ರಾಮಾಣಿಕವಾಗಿ ದೇಶದ ಆಗುಹೋಗುಗಳನ್ನು ನಡೆಸಿಕೊಂಡು ಹೋಗಬೇಕು. ಪ್ರಾಮಾಣಿಕತೆಯ ಕೊರತೆ ಇವತ್ತು ಬಹಳ ಇದೆ. ಅದನ್ನು ನಿಮ್ಮಲ್ಲಿ ಸ್ವತಃ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಹೇಳಿದರು. ಶ್ರೀ ತುಳಸಿದಾಸ್ ದಾಸಪ್ಪನವರು ನಮ್ಮನ್ನು ಬಹಳ ಹತ್ತಿರದಿಂದ ಚಿಕ್ಕವಯಸ್ಸಿನಿಂದ ನೋಡಿರುವವರು. ಈ ಸಂದರ್ಭದಲ್ಲಿ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ಮಾನ್ಯ ನಿಜಲಿಂಗಪ್ಪನವರು ಅವರ ಮಗಳನ್ನು ನಮ್ಮ ಮರಳವಾಡಿ ಎಂಬ ಊರಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಇವರ ಮಗಳನ್ನು ರಾಜಶೇಖರ್‌ರವರು ಮದುವೆಯಾಗಿರುವ ವಿಚಾರವು ತಮಗೆ ತಿಳಿದಿದೆ. ನನ್ನ ವಿಷಯದ ಬಗ್ಗೆ ಅನೇಕರು ಸಿಂಧ್ಯಾರವರು ಭ್ರಷ್ಟ ರಾಜಕಾರಣಿ, ಕೋಟ್ಯಾಂತರ ಆಸ್ತಿಯನ್ನು ಮಾಡಿದ್ದಾರೆ ಹಾಗೆ ಹೀಗೆ ಎಂದು ಹೇಳಿದ್ದರು. ಈ ವಿಚಾರದಲ್ಲಿ ಯಾವ ಒಬ್ಬ ರಾಜಕಾರಣಿಯೂ ಸಹಿತ ಮತ್ತೊಬ್ಬರನ್ನು ಕರೆಸಿ ಕಿವಿ ಹಿಂಡಿ ಹೇಳುವಂಥಾದ್ದು ಇಲ್ಲ. ಆದರೆ ಇವರು ನನ್ನ ವಿಚಾರ ಗೊತ್ತಾದಾಗ ನನ್ನನ್ನು ಕೇಳಿದರು. ನಿಮ್ಮ ಅಪ್ಪನ ಆಸ್ತಿ ಎಷ್ಟು? ನೀನು ಏನು ಒದ್ದಿದ್ದಿಯಾ? ನಿಮ್ಮ ತಂದೆಯವರು ಏನು ಮಾಡಿದ್ದಾರೆ ? ನಿಮ್ಮ ತಾತ ಏನು ಮಾಡಿದ್ದರು ಎಂಬ ಬಗ್ಗೆ ಸ್ಪಷ್ಟವಾಗಿ ನನ್ನನ್ನು ಕೇಳಿದರು. ಮಾನ್ಯ ನಿಜಲಿಂಗಪ್ಪನವರ ಬಳಿ ನೈತಿಕತೆಯನ್ನು ಉಳಿಸಿಕೊಂಡದ್ದು ಅಷ್ಟೇ ಅಲ್ಲ. ಅವರು ಎಡವಿದರೆ ಸರಿಯಾದಂತಹ ದಾರಿಯಲ್ಲಿ

ಹೋಗಬೇಕೆಂಬ ಹಿತವಚನವನ್ನು ಹೇಳಿದಂಥಾದ್ದನ್ನು, ನಾನು ಈ ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ತುಳಸಿದಾಸ್ ದಾಸಪ್ಪನವರೂ ಸಹಿತ ತಮ್ಮ ವೈಯುಕ್ತಿಕ ಜೀವನದಲ್ಲಿ ಪ್ರಾಮಾಣಿಕತೆಯನ್ನು ಬೆಳೆಸಿಕೊಂಡಿದ್ದು ಅಷ್ಟೇ ಅಲ್ಲ, ಆ ಪೀಳಿಗೆ ಹೆಚ್ಚು ಆಗಬೇಕು ಎಂದು ಪ್ರಾಮಾಣಿಕವಾಗಿ ನಂಬಿದವರು. ಇವರಿಗೆ ಯುವ ಶಕ್ತಿಯಲ್ಲಿ ಬಹಳ ನಂಬಿಕೆ ಇತ್ತು. ಇವರ ಬಳಿ ಯುವಕರು ಹೋದಾಗ ಬಹಳ ಪ್ರೋತ್ಸಾಹಕರವಾಗಿ ಉತ್ಸಾಹದಿಂದ ದೇಶದ ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವುದರ ಜೊತೆಗೆ, ಸ್ಫೂರ್ತಿಯ ಕೇಂದ್ರವಾಗಿ, ಮುಖಂಡರಾಗಿ, ಇವತ್ತಿನ ಪೀಳಿಗೆಗೆ ಆದರ್ಶಗಳನ್ನು ಹೇಳುವಂಥಾದ್ದಕ್ಕೆ, ನೈತಿಕ ಹಕ್ಕು ಇದ್ದಂತಹ ನಾಯಕರು ಅವರಾಗಿದ್ದರು. ಅಂತಹ ಒಬ್ಬ ನಾಯಕರನ್ನು ಕಳೆದುಕೊಂಡಿರುವಂತಹ ನಮ್ಮ ರಾಜ್ಯಕ್ಕೆ ಮತ್ತು ಸಾರ್ವಜನಿಕ ಕ್ಷೇತ್ರಕ್ಕೆ ಅಪಾರವಾದ ಹಾನಿಯಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ನಮ್ಮ ಸರ್ಕಾರ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಈ ಇಬ್ಬರೂ ಮಹನೀಯರ ನೆನಪಿಗೆ ಏನಾದರೂ ಮಾಡಬೇಕು, ಮಾನ್ಯ ನಜೀರ್‌ಸಾಬ್‌ರವರ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಮಾಡಿದ್ದೇವೆ. ಮಾನ್ಯ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿಯ ವಿಚಾರದಲ್ಲಿ, ಅವರು ಮಾಡಿದಂತಹ ಕೆಲಸವನ್ನು ಶಾಶ್ವತವಾಗಿ ನೆನಪು ಮಾಡಿಕೊಳ್ಳುವ ದೃಷ್ಟಿಯಿಂದ ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಆ ಸಂಸ್ಥೆಗೆ ಒಂದು ಹೆಸರನ್ನು ಕೊಟ್ಟರೆಂದು ಕಾಣುತ್ತದೆ. ಅದೇ ರೀತಿಯಲ್ಲಿ ಕೆ.ಪ್ರಭಾಕರ್‌ರವರು ವಿಶೇಷವಾಗಿ ದುರ್ಬಲ ವರ್ಗದವರಿಗೆ ಮಾಡಿರುವಂತಹ ಕೆಲಸ ಮತ್ತು ಅವರಿಗೆ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಇದ್ದಂತಹ ನಂಬಿಕೆ ಬಹಳ ಮುಖ್ಯವಾದದ್ದು. ಇವರ ನೆನಪಿಗೆ ಏನಾದರೂ ಮಾಡುತ್ತಾರೆಂಬ ವಿಶ್ವಾಸ ನನಗೆ ಇದೆ. ಇದರ ಜೊತೆಗೆ ತುಳಸಿದಾಸ್ ದಾಸಪ್ಪನವರು ಹೆಚ್.ಸಿ. ದಾಸಪ್ಪನವರ ಆದಿಯಾಗಿ ಇವರ ನೆನಪಿನಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವಂಥಾದಕ್ಕೆ, ನಾವೆಲ್ಲರೂ ಕೂಡಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಈ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಮೃತರ ಕುಟುಂಬ-ವರ್ಗದವರಿಗೆ ದುಃಖವನ್ನು ಭರಿಸುವಂತಹ ಶಕ್ತಿ ಸಿಗಲಿ, ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

(x) ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ನಾನು ಮತ್ತು ದಿವಂಗತ ಕೆ. ಪ್ರಭಾಕರ್‌ರವರು 1967ರಿಂದ ನಿಕಟವರ್ತಿಗಳಾಗಿದ್ದವರು. ಇದರ ಜೊತೆಗೆ ಅವರು ಅಪ್ಪಟ ಗಾಂಧಿವಾದಿಗಳಾಗಿದ್ದವರು. ಇವರು ಕಾಂಗ್ರೆಸ್ ಪಕ್ಷದ

ಸಕ್ರಿಯ ಸದಸ್ಯರಾಗಿ ಕೊನೆಯವರೆಗೂ ಇದ್ದರು. ಇವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಇವತ್ತಿನ ದಿವಸ ಇವರ ಅಗಲಿಕೆಯಿಂದ ನಮಗೆ ನಷ್ಟವಾಗಿದೆ. ಇವರು ಪರಿಶಿಷ್ಟ ಜಾತಿಯವರಲ್ಲಿ ಆದರ್ಶ ವ್ಯಕ್ತಿಯೆಂದು ಹೆಸರನ್ನು ತೆಗೆದುಕೊಂಡಿದ್ದವರು. ನಾನು ಮತ್ತು ಇವರು ಅನೇಕ ಸಮಾರಂಭಗಳಲ್ಲಿ ಸೇರಿದಂತಹ ಸಂದರ್ಭಗಳಲ್ಲಿ ಇವರನ್ನು ನಾನು ಆದರ್ಶ ವ್ಯಕ್ತಿಯೆಂದು ಬೋಧನೆ ಮಾಡುತ್ತಿದ್ದೆ. ಇವತ್ತು ನಾನು ಅದನ್ನೇ ಹೇಳುತ್ತಿದ್ದೇನೆ. ಇವತ್ತು ಅಂತಹವರೊಬ್ಬರು ನಮ್ಮನ್ನು ಅಗಲಿದ್ದಾರೆ. ನಾನು 1967ರಲ್ಲಿ ವಿಧಾನ ಸಭೆಯ ಉಪಾಧ್ಯಕ್ಷನಾಗಿದ್ದಾಗ, ಅವರು ವಿಧಾನಸಭೆಯಲ್ಲಿ ಇದ್ದರು. ಇವರು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಮಾತನಾಡುತ್ತಿದ್ದರು. ಇದರ ಜೊತೆಗೆ "ಮದ್ಯಪಾನ ಸಂಯಮ ಮಂಡಳಿ"ಯ ಅಧ್ಯಕ್ಷರಾಗಿ ಒಳ್ಳೆಯ ಸೇವೆಯನ್ನು ಮಾಡಿದ್ದರು. ನಮ್ಮ ಸ್ನೇಹಿತರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಅವರು ಮದ್ಯಪಾನ ನಿರೋಧದ ಬಗ್ಗೆ ಬಹಳ ಆಸಕ್ತಿಯನ್ನು ವಹಿಸಿ ಕೆಲಸವನ್ನು ಮಾಡಿದ್ದಾರೆ. ಇವತ್ತಿನ ದಿವಸ ಇಂತಹ ಆದರ್ಶ ವ್ಯಕ್ತಿ ಕಣ್ಮರೆಯಾಗಿದ್ದಾರೆ. ನನಗಂತೂ ಬಹಳ ದುಃಖವಾಗಿದೆ. ಅವರು ಮೃತರಾಗುವ ಒಂದು ತಿಂಗಳ ಮುಂದೆ ನಾನು ಅವರ ಮನೆಗೆ ಹೋಗಿದ್ದೆ. ಆಗ ಅವರ ಆರೋಗ್ಯದ ಬಗ್ಗೆ ವಿಚಾರಿಸಿದಾಗ ಅವರು ಕೆಲವು ವಿಷಯಗಳನ್ನು ಹೇಳಿದರು. ಇವತ್ತಿನ ಸಮಾಜದಲ್ಲಿ ಈ ರೀತಿಯಾಗುತ್ತಿದೆ. ಅವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ಅಗಾಧವಾದ ಪ್ರೀತಿ ಇತ್ತು. ಅವರು ನನಗೆ ಮಂಜುನಾಥರವರೇ, ನೀವೆಲ್ಲ ಕೆಲಸ ಮಾಡಬೇಕೆಂದು ನನಗೆ ಹೇಳುತ್ತಿದ್ದರು. ಅಂತಹ ಒಬ್ಬ ಆದರ್ಶ ವ್ಯಕ್ತಿ ಇವತ್ತಿನ ದಿವಸ ಕಣ್ಮರೆಯಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹೇಳುತ್ತೇನೆ.

ಅದೇ ರೀತಿಯಲ್ಲಿ ಶ್ರೀ ತುಳಸಿದಾಸ್ ದಾಸಪ್ಪನವರು ಆಗಾಗ್ಗೆ ಗಾಂಧಿಭವನಕ್ಕೆ ಭೇಟಿ ಕೊಡುತ್ತಿದ್ದರು. ಅಲ್ಲಿ ಯಾವುದೇ ಕಾರ್ಯಕ್ರಮಗಳಾದರೂ ಅವರು ಅಲ್ಲಿಗೆ ಬರುತ್ತಿದ್ದರು. ಇವರುಗಳು "ಕ್ವಿಟ್ ಇಂಡಿಯಾ" ಚಳುವಳಿಯ ಬಗ್ಗೆ ಮತ್ತು ಅಲ್ಲಿಂದ ಕರ್ನಾಟಕದಲ್ಲಿ ಏನೇನು ಆಗುಹೋಗುಗಳು ಆಗಿದೆ ಎಂಬ ಬಗ್ಗೆ ಅರಿವಿದ್ದವರು. ಅದೇ ರೀತಿಯಲ್ಲಿ ಅನೇಕ ವಿಷಯಗಳನ್ನು ಹೇಳುವಂತಿದ್ದ ಈ ಮಹನೀಯರು ಈಗ ಕಣ್ಮರೆಯಾಗಿದ್ದಾರೆ. ಈ ಇಬ್ಬರ ಅಗಲಿಕೆಯಿಂದ ರಾಜ್ಯಕ್ಕೆ ನಷ್ಟವಾಗಿದೆ. ಇವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ, ಎಂದು ಪ್ರಾರ್ಥನೆಯನ್ನು ಮಾಡಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

(x) ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ

(x) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ತಾವು ಇಂದು ಸದನದಲ್ಲಿ ಮಂಡಿಸಿರುವಂತಹ ಸಂತಾಪ ಸೂಚನೆಗೆ ನನ್ನ ಧ್ವನಿಗೂಡಿಸುತ್ತಾ, ಮಾನ್ಯ ಕೆ. ಪ್ರಭಾಕರ್‌ರವರು ರಾಜ್ಯಕ್ಕೆ ಮಾಡಿರುವಂತಹ ಸೇವೆ ಹಾಗೂ ಅವರ ಸಂಘ ಸಂಸ್ಥೆಗಳನ್ನು ಕಟ್ಟಬೇಕು, ಅದನ್ನು ಬೆಳೆಸಬೇಕು, ಪುರಸ್ಕಾರ ಮಾಡಬೇಕೆನ್ನುವ ವಿಶೇಷವಾದಂತಹ ಛಲ ಅವರಲ್ಲಿ ಏನು ಇತ್ತು, ಅದರ ಬಗ್ಗೆ ಇಲ್ಲಿ ಎಲ್ಲರೂ ಮಾತನಾಡಿದರು. ಕೆ. ಪ್ರಬಾಕರ್‌ರವನ್ನು ಗಾಂಧಿವಾದಿಗಳೆಂದು ಹೇಳಿದರೆ ಅದು ಯಾವುದೇ ರೀತಿಯಲ್ಲಿ ಅತಿಶಯೋಕ್ತಿಯಾಗುವುದಿಲ್ಲ. ಇವರು ವಿಶೇಷವಾಗಿ ಗ್ರಾಮೀಣ ಭಾಗದ ಏಳಿಗೆಗೆ ಬಹಳಷ್ಟು ಕಳಕಳಿಯನ್ನು ಹೊಂದಿದ್ದರು. ಇನ್ನು ಇವರ ಶಿಸ್ತಿನ ಬಗ್ಗೆ ಹೇಳುವುದಾದರೆ, ಇವರ ಡ್ರೆಸ್ ಅನ್ನು ಒಳಗೊಂಡು, ಅವರ ಒಟ್ಟು ಬದುಕಿನಲ್ಲಿ ಸಾಕಷ್ಟು ಶಿಸ್ತಿರುವಂಥದ್ದರ ಬಗ್ಗೆ, ಉಳಿದವರು ಅವರನ್ನು ನೋಡಿ ಕಲಿತುಕೊಳ್ಳಬೇಕು, ಅಂತಹ ಶಿಸ್ತನ್ನು ಅವರು ಕಾಪಾಡಿಕೊಂಡಿದ್ದರು. ಇವರ ಅಗಲಿಕೆಯಿಂದ ರಾಜ್ಯಕ್ಕೆ ಬಹಳ ದೊಡ್ಡ ತುಂಬಲಾರದಂತಹ ಹಾನಿಯಾಗಿದೆಯೆಂದು ನಾನು ಅಂದುಕೊಂಡಿದ್ದೇನೆ. ನಾನು ಅವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ನೀಡಲಿಯೆಂದು ಪ್ರಾರ್ಥನೆ ಮಾಡುತ್ತೇನೆ.

ಅದೇ ರೀತಿಯಲ್ಲಿ ಶ್ರೀ ತುಳಸಿದಾಸ್ ದಾಸಪ್ಪನವರ ಮನೆತನವೆಂದರೆ ತಕ್ಷಣ ಪಾನನಿರೋಧದ ಜ್ಞಾಪಕ ಬರುತ್ತದೆ. ಅವರದು ಒಂದು ರೀತಿಯಲ್ಲಿ ಆದರ್ಶ ರಾಜಕೀಯ ಕುಂಟುಂಬವಾಗಿದೆ. ಅವರ ತಂದೆ, ತಾಯಿಯಾಗಲೀ, ಅವರ ಮಗನಾಗಿದ್ದ ಶ್ರೀ ತುಳಸಿ ದಾಸ್ ದಾಸಪ್ಪನವರಾಗಲೀ, ಅವರೆಲ್ಲರೂ ನಮ್ಮ ಪೀಳಿಗೆಯವರಿಗೆ ಒಂದು ಆದರ್ಶವಾಗಿದ್ದಾರೆ, ಅವರು ಮೌಲ್ಯಗಳನ್ನು ಭಾಷಣ ವಸ್ತುಗಳನ್ನಾಗಿ ಮಾಡಲಿಲ್ಲ. ಆ ಮೌಲ್ಯಗಳನ್ನು ತಮ್ಮ ವೈಯುಕ್ತಿಕ ಬದುಕಿನಲ್ಲಿ ಅಳವಡಿಸಿಕೊಂಡು, ಆ ಮೂಲಕ ಜನರಿಗೆ ಮಾರ್ಗದರ್ಶಕರಾಗಿದ್ದರು. ಇವರು ಸಂಸ್ಕೃತಿಗೆ ಇನ್ನೊಂದು ಹೆಸರು ತುಳಸಿದಾಸ್ ದಾಸಪ್ಪ ಎನ್ನುವ ಹಾಗೆ ಇದ್ದರು. ಇವರ ಸ್ನೇಹಿತರು ಯಾರಾದರೂ ದೆಹಲಿಯಲ್ಲಿ ಭೇಟಿಯಾದಾಗಲೆಲ್ಲಾ ಅವರ ಆರೋಗ್ಯದ ಬಗ್ಗೆ, ಇವರ ಒಳ್ಳೆಯತನದ ಬಗ್ಗೆ, ಸೌಮ್ಯತೆಯ ಬಗ್ಗೆ ಮಾತನಾಡುತ್ತಿದ್ದರು. ಇವರಿಗೆ ಜನರ ಬಗ್ಗೆ ಇದ್ದಂತಹ ಕಳಕಳಿಯ ಬಗ್ಗೆ ಮಾತನಾಡುತ್ತಿದ್ದರು. ಇವರ ಬಗ್ಗೆ ದೆಹಲಿಯಲ್ಲಿರುವಂತಹ ಸ್ನೇಹಿತರು ಆಡುತ್ತಿದ್ದಂತಹ ಮಾತನ್ನು ಕೇಳಿದಾಗ ಕರ್ನಾಟಕದಲ್ಲಿರುವಂತಹ ನಮಗೆ ಅಭಿಮಾನ ಬರುವಂತಹ ಎತ್ತರದ ಮಾತನ್ನು ಆಡುತ್ತಿದ್ದರು. ಅಂತಹ ಒಬ್ಬ ಹಿರಿಯ ನಾಯಕರನ್ನು, ಗಾಂಧಿವಾದಿಯನ್ನು ನಾವು ಕಳೆದುಕೊಂಡಿದ್ದೇವೆ. ನಮ್ಮ ಹೊಸ ಪೀಳಿಗೆಯವರು, ಅಂತಹ ಆದರ್ಶ ನಾಯಕರನ್ನು

ಗಮನಿಸುವಂತಹ ಮಹಾನ್ ವ್ಯಕ್ತಿ ಆಗಿದ್ದರು. ಇವರು ನಮ್ಮನ್ನು ಬಿಟ್ಟು ಅಗಲಿದ್ದಾರೆ ಅವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ಮತ್ತೊಮ್ಮೆ ತಾವು ತಂದಿರುವಂತಹ ಸಂತಾಪ ಸೂಚನೆಗೆ ನಮ್ಮ ಧ್ವನಿಗೂಡಿಸಿ ಮತ್ತೊಮ್ಮೆ ಶ್ರದ್ಧಾಂಜಲಿಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಆಂಜನೇಯ (ಭರಮಸಾಗರ) :– ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಾವು ಮಂಡಿಸಿರತಕ್ಕಂಥ ಈ ಒಂದು ನಿರ್ಣಯವನ್ನು ಬೆಂಬಲಿಸಿ, ಹಿರಿಯ ಗಾಂಧೀವಾದಿಗಳು, ಮಾಜಿ ಸಚಿವರಾದಂಥ ಕೆ. ಪ್ರಭಾಕರ್‌ರವರು ನಡೆಸಿದಂಥ ಸರಳ ಜೀವನವನ್ನು ಮತ್ತು ಅವರು ಬದುಕಿದ್ದಂಥ ಕಾಲದಲ್ಲಿ ಹೋರಾಟ ಮಾಡಿದ ನೆನಪುಗಳನ್ನು ನಾನು ಈ ಸಂದರ್ಭದಲ್ಲಿ ಬಹಳ ಗೌರವಪೂರ್ವಕವಾಗಿ ನೆನೆಯುತ್ತೇನೆ. ಅವರು ನಿಧನ ಹೊಂದಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಧರಂಸಿಂಗ್‌ರವರು ಅವರ ಅಂತಿಮ ದರ್ಶನಕ್ಕೆ ಬಂದಿದ್ದರು. ಅದೇ ರೀತಿ, ನಮ್ಮ ದಲಿತ ನಾಯಕರಾಗಿರತಕ್ಕಂಥ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರೂ ಬಂದಿದ್ದರೂ. ಕಳೆದ ತಿಂಗಳು ನಡೆದ, ಅವರ ಸ್ಮರಣೆ ಮಾಡತಕ್ಕಂಥ ಕಾರ್ಯಕ್ರಮದಲ್ಲೂ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ನಾವು ಮತ್ತು ಅವರ ಕುಟುಂಬದ ಸದಸ್ಯರೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಪ್ರಾರ್ಥನೆ ಮಾಡಿದ್ದೆವು. ಇಷ್ಟೊಂದು ಆದರ್ಶ ಬದುಕನ್ನು ಸಾಗಿಸಿರತಕ್ಕಂಥ ವ್ಯಕ್ತಿಗಳು ದಲಿತ ಜನಾಂಗದಲ್ಲಿ ಬಹಳ ವಿರಳ, ಪ್ರಭಾಕರ್ ಅವರಲ್ಲಿ ಸರಳ ಸಜ್ಜನಿಕೆ ಮತ್ತು ಆದರ್ಶಗಳಿದ್ದವು. ಆದರ್ಶಕ್ಕೆ ಮತ್ತೊಂದು ಹೆಸರೇ ಕೆ. ಪ್ರಭಾಕರ್ ಎಂದರೆ ತಪ್ಪಾಗಲಾರದು. ಅಂಥ ಒಂದು ಆದರ್ಶ ವ್ಯಕ್ತಿತ್ವವನ್ನು ಅಳವಡಿಸಿಕೊಂಡಿದ್ದಂಥ ಹಿರಿಯ ಗಾಂಧೀವಾದಿಗಳ ಹೆಸರು ಈ ನಾಡಿನಲ್ಲಿ ಅಜರಾಮರವಾಗಿ ಉಳಿಯಬೇಕು ಎನ್ನುವುದು ನಮ್ಮ ಆಸೆಯಾಗಿದೆ. ಅವರ ಹೆಸರಿನಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಒಂದು ದೊಡ್ಡದಾದ ರೆಸಿಡೆನ್‌ಷಿಯಲ್ ಶಾಲೆಯನ್ನು ತೆರೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ವಿನಂತಿ ಮಾಡಿಕೊಂಡಿದ್ದೇವು. ಮಾನ್ಯ ಮುಖ್ಯಮಂತ್ರಿಗಳೂ ಸಹ ಆಯಿತು. ಮಾಡೋಣ ಎನ್ನತಕ್ಕಂಥ ಆಶ್ವಾಸನೆಯನ್ನು ನೀಡಿದ್ದರು. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತಿದ್ದೇನೆ. ಈಗ ನೀವು ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೋಸ್ಕರ ಹತ್ತು ರೆಸಿಡೆನ್‌ಷಿಯಲ್ ಶಾಲೆಗಳನ್ನು ತೆರೆಯುತ್ತಿದ್ದೀರಿ. ಅಂಥ ಒಂದು ರೆಸಿಡೆನ್‌ಷಿಯಲ್ ಶಾಲೆಯನ್ನು ಶ್ರೀಮಾನ್. ಕೆ. ಪ್ರಭಾಕರ್‌ರವರ ಹೆಸರಿನಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಸ್ಥಾಪನೆ ಮಾಡುವುದರ ಮೂಲಕ ಅವರನ್ನು ನೆನೆಯತಕ್ಕಂಥ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು

(x) ಈ ನಡವಳಿಕೆಯನ್ನು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ

ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರ ಅಗಲಿಕೆಯಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

ನಮ್ಮನ್ನು ಅಗಲಿರುವ ಮತ್ತೊಬ್ಬರು ತುಳಸಿ ದಾಸಪ್ಪನವರು. ತುಳಸಿ ದಾಸಪ್ಪನವರ ಕುಟುಂಬವೆಂದರೆ ಒಂದು ತ್ಯಾಗದ ಕುಟುಂಬ. ಅಂಥ ಒಂದು ತ್ಯಾಗದ ಕುಟುಂಬದ ಹಿನ್ನೆಲೆಯಿಂದ ಬಂದಂಥ ಶ್ರೀಮಾನ್ ತುಳಸಿ ದಾಸಪ್ಪವರ ಜೊತೆಯಲ್ಲಿ ನಾನು ಸುಮಾರು ಒಂದುವರೆ ದಶಕಗಳ ಕಾಲ ಕೆಲಸ ಮಾಡಿದ್ದೇನೆ, ಅವರ ಜೊತೆಯಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಅವರು ನಮ್ಮಂಥ ಯುವಕರಿಗೆ ಬೆನ್ನು ಚಪ್ಪರಿಸಿ, ಈ ದೇಶವನ್ನು ಕಟ್ಟತಕ್ಕಂತ, ಈ ನಾಡನ್ನು ಮುನ್ನಡೆಸತಕ್ಕಂಥ ಕೆಲಸದಲ್ಲಿ ಯುವಕರಲ್ಲಿ ಇರಬೇಕಾದಂಥ ಶಿಸ್ತು, ಸಂಯಮ ಮತ್ತು ಪ್ರಾಮಾಣಿಕತೆಯ ಬಗ್ಗೆ ಆಗಿಂದಾಗ್ಗೆ ಬುದ್ಧಿವಾದವನ್ನು ಹೇಳುತ್ತಿದ್ದರು. ಅಂಥ ಒಬ್ಬರು ಆದರ್ಶ ನಾಯಕರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೂ ಕೂಡ ಶಾಂತಿ ದೊರೆಯಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :– ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು. ಡಾ॥ ದಾಮೋದರ ಮುಲ್ಕಿಯವರ ಸಂತಾಪ ಸೂಚನಾ ನಿರ್ಣಯವನ್ನು ನಾಳೆ ತೆಗೆದುಕೊಳ್ಳೋಣ.